ತಾಲ್ಲೂಕು.	ಪ್ಲಾಂಟೇಷನ್‌ಗಳ ಹೆಸರು.	ಎಕರೆ.	ಹರಾಜು ಮಾಡುವ ತಾರೀಖು.	ಹರಾಜು ಮಾಡುವ ಸ್ಥಳ.	ಹರಾಜು ಮಾಡುವ ಆಫಿಸರ ಹೆಸರು.
ಹೊಸಕೋಟೆ ...	ಹಳೇಜಡಿಗೇನಹಳ್ಳಿ ...	455	16—8—03	ಕಾಡಗೋಡಿ	ಬೆಂಗಳೂರು ಡಿಸ್ಟ್ರಿಕ್ಟ್ ಸಬ್ ಡಿವಿಜನಲ್ ಫಾರೆಸ್ಟ್ ಆಫಿಸರ್ ಅಥವಾ ರೇಂಜ್ ಫಾರೆಸ್ಟ್ ಆಫಿಸರ್
	ನಲ್ಲಾಲ್ ಎ. ಬಿ. ...	734	ಡಿಟೋ		
	ಡಿಟೋ ಸಿ. ..	486	ಡಿಟೋ		
	ಅಪ್ಪಸಂದ್ರ	547	ಡಿಟೋ		
ಆನೇಕಲ್ಲು ..	ಕುಂಬಾರನಹಳ್ಳಿ ...	135½	19—8—03	ಬನ್ನೇರುಗಟ್ಟ	
	ಕಂನಮನಹಳ್ಳಿ ...		ಡಿಟೋ		

ಷರಾ—2. ಹರಾಜು ಖೈದಾದ ಕೂಡ್ಲೆ ಖರೀದಿದಾರನು $\frac{1}{4}$ ಹಿಸ್ಸೆ ಮೊಬಲಗನ್ನು ಕಟ್ಟಬೇಕು. ಮಿಕ್ಕಾಲು ಹಿಸ್ಸೆಯನ್ನು ಖರೀದಿ ತಾರೀಖು ಲಾಗಾಯಿತು 7 ದಿವಸಗಳ ಒಳಗಾಗಿ ಕಟ್ಟಬೇಕು. ಇದಕ್ಕೆ ತಪ್ಪಿದಲ್ಲಿ ಡಿಪಾಜಿಟ್ ಮೊಬಲಗನ್ನು ಸರ್ಕಾರಕ್ಕೆ ಜೇರಿಸಿಕೊಳ್ಳುವದಲ್ಲದೆ ಹುಲ್ಲನ್ನು ದುಸರಾ ಹರಾಜು ಮಾಡಿ ಅದರಿಂದ ಉಂಟಾಗುವ ನಷ್ಟಕ್ಕೆ ಅವಲ್ ಖರೀದಿದಾರನನ್ನು ಗುರಿಮಾಡಲಾಗುತ್ತೆ. ಏನಾದರೂ ಹೆಚ್ಚು ಉತ್ಪತ್ತಿ ಆದಲ್ಲಿ ಅವಲ್ ಖರೀದಿದಾರನು ಯಾವವಿಧದಲ್ಲು ಭಾಗಿಯಾಗುವದಿಲ್ಲ. ಪೂರ್ತಿ ಹಣ ಪಾವತಿ ಮಾಡಿದ ಕೂಡಲೆ ಹುಲ್ಲು ಕಾಯ್ಯುವದಕ್ಕೆ ಲೈಸೆನ್ಸು ಕೊಡಲ್ಪಡುತ್ತೆ.

3. ಪ್ಲಾಂಟೇಷನ್ನಲ್ಲಿ ಹರಾಜುದಾರನ ಅಜಾಗ್ರತೆಯಿಂದ ಬೆಂಕೀ ವಗೈರೆ ಸಂಭವಿಸಿದಲ್ಲಿ ಖರೀದಿದಾರನು ಜವಾಬ್ದಾರನಾಗಿರುತ್ತಾನೆ. ಖರೀದಿದಾರನಿಂದಲಾಗಲೀ ಅವನ ಕಡೆ ಜನಗಳಿಂದಲಾಗಲೀ ಏನಾದರೂ ಫಾರೆಸ್ಟ್ ತಕ್ಸೀರು ನಡದಲ್ಲಿ ಫಾರೆಸ್ಟ್ ರೆಗ್ಯುಲೇಷನ್ ರೀತ್ಯಾ ಶಿಕ್ಷೆಗೆ ಗುರಿಮಾಡಲ್ಪಡುವನು.

4. ಮೇಲಿನ ಪ್ಲಾಂಟೇಷನ್‌ಗಳ ಹುಲ್ಲನ್ನು ಹಗಲಿನಲ್ಲಿ ಹರಾಜು ತಾರೀಖು ಲಾಗಾಯತು 1904ನೇ ಮಾರ್ಚಿ 31ನೇ ತಾರೀಖು ವರಿವಿಗೂ ತೆಗದುಕೊಳ್ಳಬಹುದು.

ಟಿ. ಅಬ್ದುಲ್ ಕರೀಂ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಬೆಂಗಳೂರು ಡಿಸ್ಟ್ರಿಕ್ಟ್.

ಬೆಂಗಳೂರು ಡಿಸ್ಟ್ರಿಕ್ಟು.

ಪ್ರಸಿದ್ಧ ಪತ್ರಿಕೆ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಕರ್ಕಾರ್ಕಾಹಳ್ಳಿ ತಾಲ್ಲೂಕು ಉಯ್ಯಂಬಳ್ಳಿ ಹೋಬಳಿ ಮರಳಬೇಕುಪ್ಪೆ ಎಂಬ ಗ್ರಾಮವು ಕಂದಾಯದ ಬಾಕಿಗೋಸ್ಕರ ಕರ್ಕಾರ್ಕಾಹಳ್ಳಿ ತಾಲ್ಲೂಕು ಕಛೇರಿ ಕಟ್ಟಡದಲ್ಲಿ 3—8—03ನೇ ತಾರೀಖಿನಲ್ಲಿ ಹರಾಜು ಮಾಡಲ್ಪಡುತ್ತೆಂದು 1903ನೇ ಜುಲೈ 2ನೇ ತಾರೀಖಿನ ಮೈಸೂರು ಗೆಜೆಟ್ IIನೇ ಭಾಗದಲ್ಲಿ ಘಾಯಿಷಾಗಿರುತ್ತೆ.

ತಾರೀಖು 11ನೇ ಜುಲೈ 1903.

ಇದರಿಂದ ಸಮಸ್ತ ಜನಗಳಿಗೆ ತಿಳಿಯಪಡಿಸುವದೇನಂದರೆ—ದೇವನಹಳ್ಳಿ ತಾಲ್ಲೂಕು ಜೋಡಿ ಸನ್ಯಾಸಿಹಳ್ಳಿ ಗ್ರಾಮದಲ್ಲಿ ಮೆನರ್ಸ್ ಬ್ಲೇಕ್ ಸಾಹೇಬರಿಗೆ ಇರುವ ಹಕ್ಕು ಬಾಧ್ಯತೆಯನ್ನು ರೆವಿನ್ಯೂ ಬಾಕಿಗೋಸ್ಕರ 1903ನೇ ಆಗಸ್ಟ್ 20ನೇ ತಾರೀಖಿನಲ್ಲಿ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು 1903ನೇ ಇಸವಿ ಜುಲೈ 23ನೇ ಮತ್ತು 29ನೇ ನಂಬರ್ ಮೈಸೂರ ಗೆಜೆಟ್ IIನೇ ಭಾಗದ 396ನೇ ಪೇಜಿನಲ್ಲಿ ಘಾಯಿಷಾಗಿರುತ್ತೆ.

ಇಸ್ತಿಹಾರ್‌ನಾಮಾ.

ಬೆಂಗಳೂರು ತಾಲ್ಲೂಕು ಯೆಲಹಂಕದ ಹೋಬಳಿ ಜೋಡಿ ಮಲ್ಲಸಂದ್ರ ಗ್ರಾಮವು ಸದರಿ ಜೋಡಿದಾರ್ ಗಿರಿಯಮ್ಮನವರು ಜೋಡಿ ಪೊಬಲಗು ಸರ್ಕಾರಕ್ಕೆ ಪಾವತಿ ಮಾಡದೆ ತಪ್ಪಿದ್ದರಿಂದ ಆ ತಾಲ್ಲೂಕು ಅಮಲ್ದಾರ್ರ ರೂಬರೂಬು 1903ನೆಯ ಇಸವಿ ಆಗಸ್ಟ್ 20ನೇ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆಂದು 1903ನೇ ಇಸವಿ ಜುಲೈ 23ನೇ ಮತ್ತು 29ನೇ ನಂಬರ್ ಮೈಸೂರ ಗೆಜೆಟ್ IIನೇ ಭಾಗದ 395ನೇ ನಂಬರ್ ಪೇಜಿನಲ್ಲಿ ಪ್ರಸಿದ್ಧಪಡಿಸಲ್ಪಟ್ಟಿದೆ.

ಹೆಚ್. ಹೆಚ್. ಸ್ಪಾರ್ಕ್ಸ್,
ಡೆಪ್ಯುಟಿ ಕಮಿಷನರ್.

ಕೋಲಾರ ಡಿಸ್ಟ್ರಿಕ್ಟ್.

ತಾರೀಖು 2ನೇ ಜುಲೈ 1903.

ಶಿಡ್ಲಗಟ್ಟದ ತಾಲ್ಲೂಕು ಜಂಗಂಕೋಟೆ ಹೋಬಳೀಗೆ ಸೇರಿದ ಕಾಯಂಗುತ್ತಾ ಕರಿಯನಪುರ ಗ್ರಾಮವು, ಸರ್ಕಾರಕ್ಕೆ ಬರಬೇಕಾದ ಜೋಡಿ ಬಾಕಿಗೋಸ್ಕರವಾಗಿ, ತಾಲ್ಲೂಕು ಅಮಲ್ದಾರ್ರ ಕಛೇರಿಯಲ್ಲಿ 1903ನೇ ಇಸವಿ ಸೆಪ್ಟಂಬರ್ ಮಾಹೆ 1ನೇ ತಾರೀಖಿನ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

(ಹೆಚ್ಚು ತಪಶೀಲ್ ಬಗ್ಗೆ 16—7—1903ನೇ ಮಾರ್ಕ್ಹಂ 28ನೇ ನಂಬರ್ ಮೈಸೂರ ಗೆಜೆಟ್ಟಿನ IIನೇ ಭಾಗದ 372—373ನೇ ನಂಬರ್ ಪೇಜು ನೋಡತಕ್ಕದ್ದು.)

ಇಸ್ತಿಹಾರ್‌ನಾಮೆ ತಾರೀಖು 7ನೇ ಜುಲೈ 1903.

ಮಾರ್ಜಿನ್ನಲ್ಲಿ ನಮೂದು ಮಾಡಿ ಇರುವ ಕೋಲಾರ ಮತ್ತು ಶಿಡ್ಲಗಟ್ಟದ ತಾಲ್ಲೂಕುಗಳಿಗೆ ಸೇರಿದ ಇನಾಂ ಗ್ರಾಮಗಳು ಸರ್ಕಾರಕ್ಕೆ ಬರಬೇಕಾದ ಬಾಕೀಗೋಸ್ಕರವಾಗಿ ತಾಲ್ಲೂಕು ಅಮಲ್ದಾರ್ರ ಕಛೇರಿಯಲ್ಲಿ 1903ನೇ ಇಸವಿ ಸೆಪ್ಟಂಬರ್ ಮಾಹೆ 1ನೇ ತಾರೀಖಿನ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತವೆಂದು ಇದರಿಂದ ಪ್ರಸಿದ್ಧ ಪಡಿಸಲ್ಪಟ್ಟಿದೆ.

(1) ಕೋಲಾರ ತಾಲ್ಲೂಕು ವಕ್ಕಲೇರಿ ಹೋಬಳಿ ಜೋಡಿ ಪಾರಶೀಗ್ಯಾನಹಳ್ಳಿ ಗ್ರಾಮ.
(2) ಶಿಡ್ಲಗಟ್ಟದ ತಾಲ್ಲೂಕು ಜಂಗಮಕೋಟೆ ಹೋಬಳಿ ಖಾಯಂಗುತ್ತಾ ಪುರ ಗ್ರಾಮ.

(ಹೆಚ್ಚು ತಪಶೀಲ ಬಗ್ಗೆ 23—7—1903ನೇ ಮಾರ್ಕ್ಹಂ 29ನೇ ನಂಬರ್ ಮೈಸೂರ ಗೆಜೆಟ್ IIನೇ ಭಾಗದ 398—397ನೇ ನಂಬರ್ ಪೇಜುಗಳನ್ನು ನೋಡತಕ್ಕದ್ದು.)

ಎಫ್. ಸಿ. ಕಾರ್,
ಡೆಪ್ಯೂಟಿ ಕಮಿಷನರ್.

ತಾರೀಖು 2ನೇ ಜುಲೈ 1903.

ಶಿಡ್ಲಗಟ್ಟದ ತಾಲ್ಲೂಕು ಜಂಗಂಕೋಟೆ ಹೋಬಳೀಗೆ ಸೇರಿದ ಖಾಯಂಗುತ್ತಾ ಚಿಕ್ಕಬಲ್ಲ ಗ್ರಾಮವು, ಸರ್ಕಾರಕ್ಕೆ ಬರಬೇಕಾದ ಜೋಡಿ ಬಾಕೀಗೋಸ್ಕರವಾಗಿ, ಆ ತಾಲ್ಲೂಕು ಅಮಲ್ದಾರ್ರ ಕಛೇರಿಯಲ್ಲಿ 1903ನೇ ಇಸವಿ ಸೆಪ್ಟಂಬರ್ ಮಾಹೆ 1ನೇ ತಾರೀಖಿನ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧ ಪಡಿಸಲ್ಪಟ್ಟು ಇದೆ.

(ಹೆಚ್ಚು ತಪಶೀಲು ಬಗ್ಗೆ 16—7—1903ನೇ ಮಾರ್ಕ್ಹಂ 28ನೇ ನಂಬರ್ ಮೈಸೂರ ಗೆಜೆಟ್ಟಿನ IIನೇ ಭಾಗದ 374ನೇ ನಂಬರ್ ಪೇಜು ನೋಡತಕ್ಕದ್ದು.)

ತಾರೀಖು 24ನೇ ಜೂ 1903.

ಕೋಲಾರ ತಾಲ್ಲೂಕಿಗೆ ಶೇರಿದ ಕಾಯಂಗುತ್ತಾ ರಾವಪಾಪುರದ ಗ್ರಾಮವು ಸರಕಾರಕ್ಕೆ ಬರಬೇಕಾದ ಜೋಡಿ ಬಾಕೀಗೋಸ್ಕರವಾಗಿ ಕೋಲಾರ ತಾಲ್ಲೂಕು ಅಮಲ್ದಾರ್ರವರ ಕಛೇರಿಯಲ್ಲಿ 1903ನೇ ಇಸವಿ ಆಗಸ್ಟ್ 11ನೇ ತಾರೀಖಿನಲ್ಲು ಬಹಿರಂಗವಾಗಿ ಹರಾಜು ಮಾಡಲ್ಪಡುತ್ತದೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಬಹಳ ಹೆಚ್ಚು ತಪಶೀಲು ಬಗ್ಗೆ 16—7—1903ನೇ ಮಾರ್ಕ್ಹಂ 28ನೇ ನಂಬರ್ ಗಜೆಟ್ಟಿನ IIನೇ ಭಾಗದ 371—372ನೇ ನಂಬರ್ ಪೇಜು ನೋಡತಕ್ಕದ್ದು.

ಎಚ್. ದಾಸಪ್ಪ,
ಫಾರ್ ಡೆಪ್ಯೂಟಿ ಕಮಿಷನರ್.

ತುಮಕೂರು ಡಿಸ್ಟ್ರಿಕ್ಟ್.

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಹೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

1. ಕಂದಾಯದ ಬಾಕೀದಾರರಾದ ಜೋಡಿ ಹುಳಿಸಂದ್ರದ ತಿಮ್ಮಪ್ಪ ವಗೈರೇರಿಂದ ಜೋಡಿ ಹುಳಿಸಂದ್ರ ಗ್ರಾಮಕ್ಕೆ ಬರಬೇಕಾದ ಜಮ್ಮಾ ಕಂದಾಯದ ಬಾಕೀಗಾಗಿ ಇದರಿಂದ ನಮೂದಾಗುವ ಸ್ಥಿರಸ್ವತ್ತು ತುಮಕೂರು ಡಿಸ್ಟ್ರಿಕ್ಟ್ ತಿಪಟೂರು ತಾಲ್ಲೂಕು ಕಛೇರಿಯಲ್ಲಿ ಸ್ ೧೯೦೩ನೇ ಇಸವಿ ಸೆಪ್ಟಂಬರ್ 7ನೇ ತಾರೀಖು ಸೋಮವಾರದಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹರಾಜು ಸದರಿ ತಾರೀಖ್ಕುದಿವಿ 11 ಘಂಟೆಗೆ ಉದಕ್ಕಮಿಸಲ್ಪಡುತ್ತೆ. ಸ್ವತ್ತು ಏಕದಂ ಜಡದರಖಾನ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1901ನೇ ಸಾಲಿಗೆ ಪೂರ್ತಿಯಾಗಿ * 316—2—10 ರೂಪಾಯಿಗಳನ್ನ ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಗೆ 316—2—10 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಕೇಕಡಾ 25 ರೂಪಾಯನ್ನ ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜು ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜ್‌ದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಹ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೇ ಯಾ ವಿಜಂಟು ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೇ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವೆಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೆ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲಿ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮ್ಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮ್ಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮ್ಮಿಷನರವರಿಂದ ಸೈ್ನ್ ಮೊಹರ್ ಮಾಡಲ್ಪಟ್ಟ ಬಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಲಿತ್ಯಗಳಿಗೆ ಗವರ್ನ್‌ಮೆಂಟಿನವರು ಜವಾಬ್‌ದಾರ್ರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಿಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ಸಾಯಿದೆಯಲ್ಲಿ ಗವರ್ನ್‌ಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು:—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಅಂದಾಜಾ ಕಿಮ್ಮತ್ತು.	ಜಮೀನು. ನಂಬರ್ ಅಥವಾ ಜಮೀನಿನ ಹೆಸರು.	ಖುಷ್ಕಿ, ತರೀ ಅಥವಾ ಬಾಗಾಯತು.	ವಿಸ್ತೀರ್ಣ.	ಆಕಾರ.	ಸರ್ಕಾರಕ್ಕೆ ಬರಬೇಕಾದ ನಿಲ್ವಳ ಬಾಕೀ ಮೊಬಲಗು. ರೂ.	ಆ.	ಪೈ.
ನಿಸ್ಪೂರು	ಕಬ್ಬಿನಕಟ್ಟೆ	ಜೋಡಿ ಹುಣಸಂದ್ರ	ಜಗ್ಗೇಶಪ್ಪನ ಮಸ್ಸು	...	ರೂ. ಆ. ಪೈ.	ಖುಷ್ಕಿ	ಖಂ. ಕೊ. ಪ. 37 1 0		ರೂ. ಆ. ಪೈ.	316	2	10 ಶಾರ್ವರಿ ಮತ್ತು ಪಟವಸಾಲ್ ಬಾಕಿ
						ತರಿ	34 1 8	..	..			
						ಪರಂಪೋಕು	16 16 6			0	8	0 ನೋಟಿಸ್ ಫೀ
							87 18 4					

* ಯಾ ಬಾಕೀ ಇರುವ ಮಟ್ಟಿಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

ಸ್ಥಿರಸ್ವತ್ತಿನ ಹರಾಜು ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು ನೇ ಮಾಹೆ 1903.

1. ಕಂದಾಯದ ಬಾಕೀದಾರರಾದ ಮದ್ದಗಿರಿ ಗ್ರಾಮದ ನಿವಿತ್ರಮ್ಮನವರಿಂದ ಕಾಯಂಗುತ್ತಾ ವ್ಯಾಕೆತಿಮ್ಮನಹಳ್ಳಿ ಗ್ರಾಮಕ್ಕೆ ಬರಬೇಕಾದ ಜಮ್ಮಿ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ತುಮಕೂರು ಡಿಸ್ಟ್ರಿಕ್ಟ್ ಮದ್ದಗಿರಿ ತಾಲ್ಲೂಕು ಕಚೇರಿ ರೂಬರೂಬ್ 1903ನೇ ಇಸವಿ ಸೆಪ್ಟಂಬರ್ 7ನೇ ತಾರೀಖು ಸೋಮವಾರ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹರಾಜು ಸದರೀ ತಾರೀಖು ಪೂರ್ವಾಹ್ನ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡ ದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1901—1902ನೇ ಸಾಲಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ 12—6—9 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಕೇಕಡಾ 25 ರೂಪಾಯಿಗಳನ್ನ ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತೀ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೇ ಯಾ ವಿಜಂಟು ಯಾ ಮುತಾಲೀಕರಾಗಿ ಸವಾಲ್ಮಾಡುತ್ತಾರೆಯೇ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ವಿಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚೆತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ವ್ಯವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟು ಕೂಡ್ಲೆ, ಹರಾಜುದಾರು ಸದರೀ ಸ್ವತ್ತಿನ ಸ್ವಾಧೀನವನ್ನು ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ವಾಲಿತ್ಯಗಳಿಗೆ ಗವರ್ಮೆಂಟಿನವರು ಜವಾಬ್‌ದಾರ್ರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಿಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯಿತು 30 ದಿವಸಗಳಲ್ಲಿ ಡೆಪ್ಯುಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು :—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು. ಸ್ವತ್ತಿಗೆ ಸೇರಿದ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು. ಅದರಲ್ಲಿರುವ ಕಟ್ಟಡಗಳ ಸಂಖ್ಯೆ.	ಸ್ವತ್ತಿನ ತಪ್ಸೀಲ್. ಜಮೀನು. ಸರ್ವೆ ನಂಬರ್ ಅಥವಾ ಜಮೀನಿನ ಹೆಸರು.	ಸ್ವತ್ತಿನ ತಪ್ಸೀಲ್. ಜಮೀನು. ಖುಷ್ಕಿ, ತರೀ ಅಥವಾ ನಾ ಬಾಗಾಯತು.	ಸ್ವತ್ತಿನ ತಪ್ಸೀಲ್. ಜಮೀನು. ವಿಸ್ತೀರ್ಣ.	ಸ್ವತ್ತಿನ ತಪ್ಸೀಲ್. ಜಮೀನು. ಎಕರೆ.	ಸರ್ಕಾರಕ್ಕೆ ಬರಬೇಕಾದ ನೋಟಿಸ್ ಫೀ ವಗೈರೆ ಸಹಿತ ವಾದ ಬಾಕೀ ಮೊಬಲಗು.
								ಎ. ಗು.	ರೂ. ಆ. ಪೈ.	
ಸುಬ್ಬಣ್ಣಿ ಪುರದರೆ	ಕಾಯಂಗುತ್ತಾ ನಷ್ಟಹಿನ್ನಹಳ್ಳಿ	ಸಾವಿತ್ರಮ್ಮ	...	...	ಬಾಯಂಗುತ್ತಾ ಪೂರಾಗ್ರಾಮ	ಪರಂಪೋಕು		152 33	2 0 0	ಪ್ಲವ ಸಂವತ್ಸರದ ಬಗೆ (1901—02) ರೂ. ಆ. ಪೈ.
						ಖುಷ್ಕಿ ...		403 10	92 8 0	10—14—9 ಖುಲ್ಲು
						ಬಾಗಾಯತು		0 19	0 4 0	1— 8—0 ನೋಟಿಸ್ ಫೀ
						ಜುಮ್ಲಾ ...		556 22	94 12 0	ವಗೈರೆ 12— 6—9

* ಯಾ ಬಾಕಿ ಇರುವ ವಾಟ್ಸಿಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

ಎಂ. ಎಸ್. ನಾರಾಯಣರಾವ್,
ಡೆಪ್ಯುಟಿ ಕಮಿಷನರ್.

ಮೈಸೂರು ಡಿಸ್ಟ್ರಿಕ್ಟ್.

ಇನ್ಸಿ ಹಾರ್.

ತಾರೀಖು 20ನೇ ಜುಲೈ 1903.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಮೈಸೂರು ಡಿಸ್ಟ್ರಿಕ್ಟು ಎಡತೊರೆ ತಾಲ್ಲೂಕು ರಾಮಸಮುದ್ರದ ನಾಲಾ ಬಡಾವಣೆಗಾಗಿ ಅಕ್ವೈರು ಮಾಡಿಕೊಂಡಿರುವ ಜಮೀನುಗಳಿ ಕಂಪೆನ್ಸೇಷನ್ ಮೊಬಲಗು ಇದೆ ಸಾಲ್ ಆಗಸ್ಟು ಗುರ್ತೀಲಾಗಾಯಿತು ಪಾವತಿ ಮಾಡಲ್ಪಡುತ್ತೆ.

ಸದರಿ ಜಮೀನುಗಳಲ್ಲಿ ಹಕ್ಕು ಯಾ ಬಾಧ್ಯತೆವುಳ್ಳವರು ತಮ್ಮಲ್ಲಿರುವ ವಿಶಿಷ್ಟ ಟೈಟಲ್ ಡೀಡುಯಾನೆ ದಾಖಲಾತುಗಳು ನಿಜೀ ಈ ತಾರೀಖು ಲಾಗಾಯಿತು ಒಂದು ತಿಂಗಳೊಳಗಾಗಿ ನಮ್ಮ ರೂಬರೂ ಹಾಜರಾಗಿ ವಾಂಗ್ಮೂಲ ಕೊಟ್ಟು ತಮ್ಮ ಹಕ್ಕನ್ನು ಊರ್ಜೆತಪಡಿಸಿಕೊಟ್ಟು ವಿಧಾಯಕವಾದ ಕಂಪೆನ್ಸೇಷನ್ ಮೊಬಲಗನ್ನು ಪಡಿಯಬಹುದು.

ಬಿ. ಕೃಷ್ಣರಾವ್,
ಅಡಿಷನಲ್ ಅಸಿಸ್ಟೆಂಟ್ ಕಮಿಷನರ್.

ಹಾಸನ ಡಿಸ್ಟ್ರಿಕ್ಟ್.

ನೋಟಿಸ್.

ತಾರೀಖು 9ನೇ ಜುಲೈ 1903.

ಇದರಿಂದ ಸಮಸ್ತ ಜನರಿಗು ತಿಳಿಯಪಡಿಸುವದೇನಂದರೆ—ಹೊಳೆ ನರಸೀಪುರದಲ್ಲಿ ಹೇಮಾವತಿ ನದಿಗೆ ಸೇತುವೆ ಕಟ್ಟಿಸಿ ಹೊಸ ರಸ್ತೆ ಹಾಕಿದ ಸಂದರ್ಭದಲ್ಲಿ ಸರಕಾರಿ ರಸ್ತೆಗೋಸ್ಕರ ಇದೆ ಟರ್ವನಲ್ಲಿ ದೊಣ್ಯೆಯ್ಯನ ಜಂಗವು ಮತವೆಂಬ—ಪೂರ್ವಕ್ಕೆ—ನಂಜಪ್ಪನ ಸರ್ವೆ 94ನೇ ಪೈಕಿ ಹೊಲ, ಪಶ್ಚಿಮಕ್ಕೆ—ಸರ್ವೆ 95ನೇ ಹೊಲ, ದಕ್ಷಿಣಕ್ಕೆ—ಹಾಸನದ ರಸ್ತೆ, ಉತ್ತರಕ್ಕೆ—ಕೀಳು ನಾಲೆ—ಈ ಮಧ್ಯೆ ಪೂರ್ವ ಪಶ್ಚಿಮ ಗಜ 40, ದಕ್ಷಿಣೋತ್ತರ ಗಜ 60, ಸಲೆ ಗಜ 2400 ಪುಳ್ಳ ಪಾಳು ಜಾಗಾ ಪೈಕಿ ಸರಕಾರಕ್ಕೆ ತೆಗದುಕೊಂಡ 1815 ಗಜ ಪುಳ್ಳ ಜಾಗಾಕ್ಕೆ ಮಾಲೀಕರಿಗೆ ಪಾವತಿಯಾಗಲು 12 ಹನ್ನೆರಡು ರೂಪಾಯಿ ಕಾಂಪನ್ಸೇಷನ್ ಗೊತ್ತಾಗಿ ಸದರೀ ಮತದ ಜಾಗಾಕ್ಕೆ ವಾರಸುದಾರು ನಿರ್ಧರ ಪಡದೆ ಬಾಕಿಯಲ್ಲಿರುತ್ತೆ. ಮೇಲ್ಕಂಡ ಪಾಳು ಜಾಗಾವು ಯಾರ ಸ್ವಾಧೀನದಲ್ಲಿದ್ದು ಸದರೀ ಕಾಂಪನ್ಸೇಷನ್ ಮೊಬಲಕ್ಕೆ ಹಕ್ಕುದಾರು ಯಾರೋ ಅವರು ತಮ್ಮ ಹಕ್ಕನ್ನು ತಕ್ಕ ಕೋರ್ಟಿನಲ್ಲಿ ಸ್ಥಿರಪಡಿಸಿಕೊಂಡು ಆ ಕೋರ್ಟು ಸರ್ಟಿಫಿಕೇಟನ್ನು ಈ ನೋಟೀಸು ಗೆಜೆಟ್ಟಿನಲ್ಲಿ ಘಾಯಿಷಾದ ತಾರೀಖು ಲಾಗಾಯಿತು 6 ಆರು ತಿಂಗಳ ವಳಗಾಗಿ ನಮ್ಮಲ್ಲಿ ಹಾಜರ್ಮಾಡಿದಲ್ಲಿ ಅಂಥಾವರಿಗೆ ಕಾಂಪನ್ಸೇಷನ್ ಮೊಬಲಗು ಪಾವತಿ ಮಾಡಿಸುತ್ತೆ. ಇದಕ್ಕೆ ತಪ್ಪಿದಲ್ಲಿ ಮೇಲ್ಕಂಡ ಮೊಬಲಗು ಯಾರಿಗೂ ಶಿಕ್ಕಲಾರದು.

ಡಿ. ದೇವರಾಜೆ ಅರಸ್,
ಡೆಪ್ಯುಟಿ ಕಮಿಷನರ್.

ಶಿವಮೊಗ್ಗ ಡಿಸ್ಟ್ರಿಕ್ಟ್ ಜಡ್ಜ್‌ರವರ ಕೋರ್ಟನಲ್ಲಿ.

ಸ್ ೧೯೦೩—೧೯೦೪ನೇ ಇಸವಿ ಮಿ|| ಅರ್ಜೀ ನಂಬರ್ 4.

ಹೊನ್ನಾಳಿ ತಾಲ್ಲೂಕು ಬಳಗುತ್ತಿ ಮಾಗಣಿ ಯರಗನಹಾಳಲ್ಲಿ ವಾಸವಾಗಿದ್ದು ಮೃತಪಟ್ಟ ಮುದಿಯಪ್ಪನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ವೀರಭದ್ರಪ್ಪ ಬಿ ಮುದಿಯಪ್ಪ ಮೈನರ್, ಕ್ಷೇಮಚಿಂತಕಳು ವೀರಮ್ಮ ಕೋಂ ಚನ್ನಬಸಪ್ಪನಿಗೆ ಖಾಸಾ ಮಗಳು ಆಗಬೇಕೆಂಬಹಕ್ಕುದಾರಿಮೇಲೆ ವೀರಭದ್ರಪ್ಪ ಮೈ|| ಗಾ|| ಅತ್ತಿಗಿ ವೀರಮ್ಮನು, ಹೊನ್ನಾಳಿತಾಲ್ಲೂಕು ಬಳಗುತ್ತಿ ಮಾ|| ಯರಗನಾಳು ಸ್ಥಳದ ವಾಸಸ್ಥರಾಗಿ ಮೃತಪಟ್ಟ ಮುದಿಯಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ 241—8—0 ಸಾಲವನ್ನು ವಸೂಲ್ ಮಾಡುವದಕ್ಕೆ ಸ್ ೧೯೦೧ನೇ ಇಸವಿ VIIನೇ ನಂಬರ್ ರೆಗ್ಯುಲೇಷನ್ ಮೇರಿಗೆ ಸರ್ಟಿಫಿಕೇಟು ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ವೀರಭದ್ರಪ್ಪ ಬಿ ಮುದಿಯಪ್ಪ ಮೈನರ್, ಗಾರ್ಡಿಯರ್ ವೀರಮ್ಮನವರ ಅರ್ಜಿಯನ್ನು ಸ್ ೧೯೦೩ನೇ ಇಸವಿ ಆಗಸ್ಟು ತಿಂಗಳು ತಾರೀಖು 21ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮುದಿಯಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ೧೯೦೩ನೇ ಇಸವಿ ಜುಲೈ ತಿಂಗಳು 16ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಸ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ್ ೧೯೦೨–೦೩ನೇ ಇಸವಿ ಮಿ|| ಅರ್ಜೀ ನಂಬರ್ 224.

ಕೊಪ್ಪ ತಾಲ್ಲೂಕು ಜಂಟಿಗೆ ಆಗ್ರಹಾರದಲ್ಲಿದ್ದು ಮೃತಪಟ್ಟ ರಂಗಾಭಟ್ಟರ ಆಸ್ತೀ ವಿಷಯದಲ್ಲಿ—

ಅರ್ಜೀದಾರು 1ನೇ ವೆಂಕಮ್ಮ ಕೋಂ ಸುಬ್ಬಾಭಟ್ಟ, 2ನೇ ಇವರ ತಂಗಿ ಲಕ್ಷ್ಮಕ್ಕಮ್ಮ, ಕೋಂ ಶಂಕರನಾರಣಜೋಯಿಸ ಕೊಪ್ಪತಾಲ್ಲೂಕು ಜಂಟಿಗೆ. ಮೃತಪಟ್ಟ ಸದರೀ ರಂಗಾಭಟ್ಟರಿಗೆ ಹೆಂಣು ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ಜಂಟಿಗೆ ಸ್ಥಳದ 1ನೇ ವೆಂಕಮ್ಮ ಕೋಂ ಸುಬ್ಬಾಭಟ್ಟ, 2ನೇ ಇವರ ತಂಗಿ ಲಕ್ಷ್ಮಕ್ಕಮ್ಮನವರು ಜಂಟಿಗೆ ವಾಸಸ್ಥರಾಗಿ ಮೃತಪಟ್ಟ ರಂಗಾಭಟ್ಟರ ಜಿಂದಗಿ ಬಗ್ಯಾಗಿ ಬರತಕ್ಕ 720—0—0 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೇ ಇಸವಿ VIIನೇ ರಗ್ಯುಲೇಷನ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ 1ನೇ ವೆಂಕಮ್ಮ, 2ನೇ ತಂಗಿ ಲಕ್ಷ್ಮಕ್ಕಮ್ಮನವರ ಅರ್ಜಿಯನ್ನು ಸ್ ೧೯೦೩ನೇ ಇಸವಿ ಜುಲೈ ತಿಂಗಳು ತಾರೀಖು 31ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ರಂಗಾಭಟ್ಟರ ಆಸ್ತಿಗೆ ಹಕ್ಕುದಾರರಾದ ವಿಸಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ೧೯೦೩ನೇ ಇಸವಿ ಜುಲೈ ತಿಂಗಳು 16ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಿಸ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸಿ. ಶೇಷಯ್ಯಂಗಾರ್, ಶಿರಸ್ತೆದಾರ್.